# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಸಕಲೇಶಪುರ

## C .C.No. 271/2024

| | | |
|---|---|---|
| **ಹೆಸರುಃ** | **ಜಯಮ್ಮ** | **CW-2** |
| **ತಂದೆ/ಗಂಡ ಹೆಸರುಃ** | **ಹೂವಣ್ಣಗೌಡ** | **PW-2** |
| **ವಯಸ್ಸುಃ** | **60 ವರ್ಷ** | |
| **ವೃತ್ತಿಃ** | **ವ್ಯವಸಾಯ** | |
| **ವಿಳಾಸಃ** | **ಆಡ್ರ ಹಳ್ಳಿ** | **ದಿನಾಂಕಃ25.03.2026** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದ.**

ಚಾಸಾ 1 ನನ್ನ ಮಗ ಇರುತ್ತಾರೆ. ಮೃತ ಹೂವಣ್ಣ ನನ್ನ ಗಂಡ ಇರುತ್ತಾರೆ. ದಿನಾಂಕ 27.06.2023 ರಂದು ಬೆಳಿಗ್ಗೆ 8 ರ ಸಮಯದಲ್ಲಿ ಹೂವಣ್ಣ ರವರು ಮತ್ತು ಚಾಸಾ 1 ರವರು ಆರ್ಡ ಹಳ್ಳಿ ಗ್ರಾಮದ ನಮ್ಮ ಮನೆಯ ತೋಟಕ್ಕೆ ಮರಗಸಿ ಮಾಡಲು ಏಣಿಯನ್ನು ತೆಗೆದುಕೊಂಡು ಹೋಗುತ್ತಿದ್ದಾಗ ವಿದ್ಯುತ್ ತಂತಿ ತೋಟದ ಮುಂಭಾಗ ಹೋದುಹೋಗಿದ್ದು, ಅದು ಜೋತು ಬಿದ್ದಿರುತ್ತದೆ. ಅದನ್ನು ಗಮನಿಸದೆ ಏಣಿಯನ್ನು ಎತ್ತಿಕೊಂಡು ಹೋಗುತ್ತಿರುವಾಗ, ಅದು ತಂತಿಗೆ ತಾಗಿದ್ದರಿಂದ ಕರೆಂಟ್ ಹೊಡೆದು ನನ್ನ ಗಂಡ ಕೆಳಗೆ ಕುಸಿದಿರುತ್ತಾರೆ. ತಕ್ಷಣ ಚಾಸಾ 1 ರವರು ಅವರನ್ನು ಹೆತ್ತೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ, ವೈದ್ಯರು ನನ್ನ ಗಂಡ ಮೃತ

ಪಟ್ಟಿರುವುದಾಗಿ ತಿಳಿಸಿರುತ್ತಾರೆ. ಮೃತ ದೇಹವನ್ನು ನಮ್ಮ ಮನೆಗೆ ವಾಪಸ್ಸು ತಂದಿರುತ್ತೇವೆ. ಅದೇ ದಿನ ಚಾಸಾ 1 ರವರು ಯಸಳೂರು ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ. ಆರೋಪಿತರ ನಿರ್ಲಕ್ಷತನದಿಂದ ವಿದ್ಯುತ್ ತಂತಿ ಜೋತು ಬಿದುದ್ದರಿಂದ ಸದರಿ ಅವಘಡ ಸಂಭವಿಸಿರುತ್ತದೆ. ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ಮು ಮಾ ಪೋಟೋವನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಲ್ ಎನ್ ವಕೀಲರಿಂದ

ನಾನು ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ. ನನ್ನ ಮಗ ಘಟನೆ ಬಗ್ಗೆ ತಿಳಿಸಿರುತ್ತಾರೆ. ಘಟನೆಯಾದ 3 ನಿಮಿಷದ ನಂತರ ನಾನು ಹೋಗಿರುತ್ತೇನೆ. ನಮ್ಮ ಮನೆ ನಂತರ ರಸ್ತೆ ಇದ್ದು, ರಸ್ತೆ ನಂತರ ನಮ್ಮ ತೋಟ ಇರುತ್ತದೆ. ತೋಟದಲ್ಲಿ ನನ್ನ ಮಗ ಮತ್ತು ಗಂಡ ಮಾತ್ರ ಕೆಲಸ ಮಾಡುತ್ತಿದ್ದರು. ಮರಗಸಿ ಕೆಲಸ ಮಾಡಲು ರಸ್ತೆ ದಾಟಿ ಹೋಗುತ್ತಿದ್ದಾಗ ಘಟನೆಯಾಗಿರುತ್ತದೆ. ನಮ್ಮ ಮನೆಯಿಂದ ಘಟನಾ ಸ್ಥಳ ಕಣ್ಣು ಅಳತೆ ಯಲ್ಲಿ ಇರುತ್ತದೆ. ನಮ್ಮ ಮನೆಯ ಅಕ್ಕಪಕ್ಕ 2-3 ಮನೆಗಳು ಇರುತ್ತದೆ. ವಿದ್ಯುತ್ ತಂತಿಗಳು ಸುಮಾರು 25 ಅಡಿ ಎತ್ತರದಲ್ಲಿ ಇರುತ್ತದೆ ಎಂದರೆ ಸರಿ. ನನ್ನ ಗಂಡ ಸುಮಾರು 5 ಅಡಿ ಎತ್ತರ ಇರುತ್ತಾರೆ. ಏಣಿ ಸುಮಾರು 20 ಅಡಿ ಎತ್ತರ ಇರುತ್ತದೆ.

ಏಣಿಯನ್ನು ನನ್ನ ಗಂಡ ಭುಜದ ಮೇಲೆ ಇಟ್ಟುಕೊಂಡು ಹೋಗುತ್ತಿದ್ದರು. ಏಣಿ ನಮ್ಮದೇ ಆಗಿರುತ್ತದೆಂದು ನನ್ನ ಮಗ ತಿಳಿಸಿರುತ್ತಾರೆ. ನಾನು ಆರೋಪಿತರನ್ನು ನೋಡಿರುತ್ತೇನೆ. ಮರುದಿನ ಲೈನ್ ಕೆಲಸ ಮಾಡಲು ಬಂದಿದ್ದಾಗ ನೋಡಿರುತ್ತೇನೆ. ಘಟನಾ ಸ್ಥಳ ನಮ್ಮ ಮನೆಯಿಂದ ಕಾಣಿಸುತ್ತದೆ. ಪೊಲೀಸರಿಗೆ ಅದೇ ದಿನ ನಮ್ಮ ಮನೆಯ ಬಳಿ ಹೇಳಿಕೆ ನೀಡಿರುತ್ತೇನೆ. ಆಗ ಸಮಯ ಸುಮಾರು ಮಧ್ಯಾಹ್ನ 1 ಗಂಟೆ ಆಗಿತ್ತು. ನನ್ನ ಗಂಡನಿಗೆ ಎಡ ಅಂಗಗೈಯಲ್ಲಿ ಗುಳ್ಳೆ ರೀತಿ ಬಂದಿತ್ತು. ದೇಹ

ಸುಟ್ಟಿರಲಿಲ್ಲ. ಕರೆಂಟ್ ಹೊಡೆದಿದ್ದರಿಂದ ಆ ರೀತಿಯಾಗಿತ್ತು. 5 ನಿಮಿಷದಲ್ಲಿ ನಾವು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಮ್ಮ ಊರಿನಿಂದ ಆಸ್ಪತ್ರೆ 4 ಕಿಮೀ ಇರುತ್ತದೆ. ನನ್ನ ಗಂಡನನ್ನು ರಾತ್ರಿ 7.45ಕ್ಕೆ ಶವ ಸಂಸ್ಕಾರ ಮಾಡಿರುತ್ತೇವೆ. ಸದರಿ ದಿನ ನನ್ನ ಗಂಡನಿಗೆ ವಿದ್ಯುತ್ ತಗುಲಿ ಮರಣ ಹೊಂದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ನಾವು ಅರ್ಜಿ ಹೂಡಿರುತ್ತೇವೆ. ಪರಿಹಾರಕ್ಕಾಗಿ ಈ ಸುಳ್ಳು ಕೇಸನ್ನು ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ವಿದ್ಯುತ್ ತಂತಿ ಕೆಳಗೆ ಬಿದ್ದಿರಲಿಲ್ಲ ಎಂದರೆ ಸರಿಯಲ್ಲ.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/–

**ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**